existing facility. Lack of understanding on the part of the officials is causing inconvenience to the poor students.

ಶ್ರೀ ಎಂ.ಪಿ. ಪ್ರಕಾಶ್ :– ಈಗಾಗಲೇ ಅವರು ಆ ಪಟ್ಟಿಯಲ್ಲಿದ್ದರೆ, ಅವರು ಏತಕ್ಕೆ ಅವರಿಗೆ ಕಷ್ಟ ಕೊಡುತ್ತಾರೋ ಗೊತ್ತಿಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– ಈಗಾಗಲೇ ಅವರು ಹಲವಾರು ವರ್ಷಗಳಿಂದ ಆ ಸವಲತ್ತನ್ನು ಅನುಭವಿಸುತ್ತಾ ಬಂದಿದ್ದಾರೆ, ಮಧ್ಯೆ ಕೆಲವು ಅಧಿಕಾರಿಗಳು ಬಂದಾಗ, ಕೊಡುವುದಿಲ್ಲವೆಂದು ಹೇಳುತ್ತಾರೆ. They don't understand.

ಶ್ರೀ ಎಂ.ಪಿ. ಪ್ರಕಾಶ್ :– ನಾನು ಈಗ ಸಮಾಜ ಕಲ್ಯಾಣ ಸಚಿವರೊಡನೆ ಮಾತನಾಡಿ, ಅವರು ಈಗಾಗಲೇ ಆ ಪಟ್ಟಿಯಲ್ಲಿರುವವರಾಗಿರುವುದರಿಂದ, ಆ ತಹಸೀಲ್ದಾರ್ ಅವರು ಯಾವುದೇ ತೊಂದರೆಯಾಗಲಾರದಂತೆ ಜಾತಿ ಪ್ರಮಾಣಪತ್ರವನ್ನು ಆ ಮಕ್ಕಳಿಗೆ ಕಾನೂನು ಪ್ರಕಾರ ಬರುವುದಿದ್ದರೆ ಕೊಡುವುದಕ್ಕೆ ಇವತ್ತೇ ನಾವು ಸೂಚನೆ ಕೊಡುತ್ತೇವೆ ಮತ್ತೆ ಜಿಲ್ಲಾಧಿಕಾರಿಗಳಿಗೂ ಕೂಡ ಈ ವಿಚಾರವನ್ನು ತಿಳಿಸುತ್ತೇವೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ :– Thank you sir.

ಊ) <u>ವಿಷಯ :– ಸಾತನೂರು ಕ್ಷೇತ್ರದಲ್ಲಿ ಆನೆಗಳ ಹಾಗೂ ಕೋತಿಗಳ ಹಾವಳಿಯನ್ನು ನಿಯಂತ್ರಿಸಲು ಕ್ರಮ ತೆಗೆದುಕೊಳ್ಳುವ ಬಗ್ಗೆ.</u>

ಶ್ರೀ ಡಿ.ಕೆ. ಶಿವಕುಮಾರ್ (ಸಾತನೂರು) :– ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ, ಈ ಚಾಮರಾಜನಗರ ಜಿಲ್ಲೆಯಿಂದ ಸ್ವಲ್ಪ ಹಿಂದೆ ಕಾವೇರಿ ಹೊಳೆಯಲ್ಲಿ ನೀರು ಕಡಿಮೆ ಇತ್ತು, ಅಲ್ಲಿಂದ ಇವರೆಲ್ಲಾ ಸೇರಿ ಆನೆಗಳನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು 100–120 ಆನೆಗಳ ಹಿಂಡು ಸೇರಿಕೊಂಡು ಎಲ್ಲಾ ಬೆಳೆಗಳನ್ನು ಹಾಳು ಮಾಡುತ್ತಿವೆ. ನಿನ್ನೆ ಊರಿನ ಒಳಗಡೆ ನುಗ್ಗಿ ಒಬ್ಬ ರೈತನನ್ನು ತುಳಿದು ಸಾಯಿಸಿದಂಥ ಘಟನೆ ನಡೆದಿದೆ. ಕಳೆದ ವಾರದ ಹಿಂದೆ 20 ಆನೆಗಳು ಒಂದು ಕಡೆ ಹೊಲಗಳಿಗೆ, ಕಬ್ಬಿನ ತೋಟಗಳಿಗೆಲ್ಲಾ ನುಗ್ಗಿದ್ದಾವೆ. ಅನೇಕ ಸಂದರ್ಭದಲ್ಲಿ ನಮ್ಮ ಅರಣ್ಯ ಇಲಾಖೆಯವರಲ್ಲಿ ವಿಚಾರ ತಿಳಿಸಿದೆವು. ಏಕೊ ಅರಣ್ಯ ಸಚಿವರು ನಮ್ಮ ಕ್ಷೇತ್ರದ ಬಗ್ಗೆ ಗಮನಹರಿಸುತ್ತಿಲ್ಲ. ಎರಡನೆಯದು

ಅಧಿಕಾರಿಗಳು ಆ ಸ್ಥಳದಲ್ಲಿ ಇಲ್ಲ ಏಕೆ ರಜೆ ಹಾಕಿ ಹೋಗುತ್ತಿದ್ದಾರೋ ಗೊತ್ತಿಲ್ಲ. ಇನ್ನೊಂದು ವಿಚಾರ, Indian Institute of Science ನವರು ಕೆಲವು ಕೋತಿಗಳ ಮೇಲೆ ಪ್ರಯೋಗ ಮಾಡಿ ಅವನ್ನು ನನ್ನ ಕ್ಷೇತ್ರಕ್ಕೆ ತಂದು ಬಿಟ್ಟುಬಿಟ್ಟಿದ್ದಾರೆ. ಇದರಿಂದ ಜನರೆಲ್ಲಾ ಹೆಚ್ಚು ಗಾಬರಿಯಾಗಿದ್ದಾರೆ. ಸಾತನೂರು ಕ್ಷೇತ್ರವನ್ನೇ ಅರಣ್ಯ ಇಲಾಖೆಯವರು ಇದಕ್ಕೆ ಏಕೆ ಆಯ್ಕೆ ಮಾಡಿದ್ದಾರೋ ಗೊತ್ತಿಲ್ಲ. ಅದನ್ನು ಹಿಡಿಸಿ ವಾಪಸ್ ತೆಗೆದುಕೊಂಡು ಹೋಗುವ ಕೆಲಸವನ್ನು ಮಾಡಿಲ್ಲ. ಹೀಗೆ ಸಾತನೂರು ಕ್ಷೇತ್ರದ ಬಗ್ಗೆ ಬಹಳ ಅಲಕ್ಷವಾಗುತ್ತದೆ. ಆನೆಯ ತುಳಿತಕ್ಕೆ ಒಳಗಾಗಿ ಯಾರು ಸತ್ತಿದ್ದಾರೆ, ಅವರಿಗೆ ಪರಿಹಾರವನ್ನು ಕೊಡಬೇಕು ಜೊತೆಗೆ, ಜನರೆಲ್ಲಾ ಹೆಚ್ಚು ಗಾಬರಿಗೊಂಡಿರುವುದರಿಂದ ಟ್ರೆಂಚ್ ಹೊಡಿಸುವುದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ನಮ್ಮದು ಆಕ್ಷೇಪಣೆ ಇದೆ ಅಧ್ಯಕ್ಷರೆ, ಇವರು ಸ್ವಜಾತಿ ಶತ್ರು. ಇವರು ಇದ್ದಾಗ ಬೇರೆ ಯಾವ ಆನೆ ಅಲ್ಲಿಗೆ ಹೋಗುವುದಕ್ಕೆ ಸಾಧ್ಯ ಇದೆ? ಇಡೀ ಕ್ಷೇತ್ರದಲ್ಲಿ ಇರತಕ್ಕಂತಹ ಒಂಟಿ ಸಲಗ ಇದು. ಬೇರೆ ಯಾವ ಆನೆಯೂ ಅಲ್ಲಿಗೆ ಹೋಗಿರಲಿಕ್ಕೆ ಸಾಧ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಚಾಮರಾಜ ನಗರ ಕ್ಷೇತ್ರದಿಂದ ನಮ್ಮ ಕಡೆ ಕಳುಹಿಸಿದರು ಎಂದು ಹೇಳಿದರು ನಾವು ಏನೂ ಕಳುಹಿಸಿಲ್ಲ. ರಾಮನಗರದ ಕಡೆ ಕಳುಹಿಸಿ ನಮ್ಮದೇನು ತಕರಾರು ಇಲ್ಲ.

ಶ್ರೀ ಡಿ.ಕೆ. ಶಿವಕುಮಾರ್ :– ಟ್ರೆಂಚ್ ಹೊಡೆಸಿ ನಮ್ಮ ರೈತರಿಗೆ ಪರಿಹಾರ ಕೊಡಿಸಿ, ಆ ಕೋತಿಗಳನ್ನು ಹಿಡಿಯುವ ಕೆಲಸವನ್ನು ಅರಣ್ಯ ಇಲಾಖೆಯವರು ಮಾಡಿದರೆ ಸಾಕು. ಕೋತಿಗಳನ್ನು ಹಿಡಿಯುವ ವ್ಯವಸ್ಥೆ ಮಾಡಬೇಕು. ಫಾರೆಸ್ಟ್ ಬಾರ್ಡರ್‌ಗೆ ಟ್ರೆಂಚ್ ಹೊಡೆಸುವ ವ್ಯವಸ್ಥೆ ಮಾಡಬೇಕು. ಇದು ದೊಡ್ಡ ಅಪರಾಧ ನಮ್ಮಲ್ಲಿ ಬಿಡುವುದಕ್ಕೆ ಅವಕಾಶವಿಲ್ಲ. ಅವರು ತಂದು ಬಿಟ್ಟಿದ್ದಾರೆ. ಮೂರನೆಯದು ಸತ್ತ ರೈತನ ಕುಟುಂಬಕ್ಕೆ ಪರಿಹಾರ ಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ ಹಿನ್ನೆಲೆಯಲ್ಲಿ ಅವರು ಬಹುಶಃ ಈಗ ನಿಮ್ಮ ಕ್ಷೇತ್ರಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಎಂದರೆ, ನಿಮ್ಮ ಬಗ್ಗೆ ಎಷ್ಟು ಪ್ರೀತಿ ಇದೆ ಎಂದು ಹೇಳಬೇಕು. ನಾಗರಾಜ್‌ರವರು ನಿಮ್ಮ ಜನರ ಬಗ್ಗೆ ಒಳ್ಳೆಯ

ಅಭಿಪ್ರಾಯ ಇಟ್ಟುಕೊಂಡಿದ್ದಾರೆ ಎಂದು ಕಾಣಿಸುತ್ತದೆ. ಒಂಟಿ ಸಲಗ ಇರಲಿ ಎಂದು ಹೇಳುವ ರಮೇಶ್‌ಕುಮಾರ್‌ರವರಿಗೆ ಪಕ್ಕದಲ್ಲಿ ಇಟ್ಟುಕೊಂಡಿದ್ದಾರೆ.

ಶ್ರೀ ಸಿ.ಸಿ. ಪಾಟೀಲ್ :- ಒಂಟಿ ಸಲಗದ ಬಗ್ಗೆ ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದರು. ಆದರೆ ಕೋತಿಗಳ ಬಗ್ಗೆ ಹೇಳಲಿಲ್ಲ.

ಶ್ರೀ ರಮೇಶ್ ಕುಮಾರ್ :- ಕೋತಿಗಳು ಇಲ್ಲಿಯೇ ಇರುವಾಗ ಇನ್ನೇನು.

ಶ್ರೀ ವಾಟಾಳ್ ನಾಗರಾಜ್ :- ಇದು ಶಾಸನ ಸಭೆ ಈ ಶಾಸನ ಸಭೆಯಲ್ಲಿ ಕೋತಿಗಳು ಕೆಲಸ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ :- ಅವರು ಹಾಗೆ ಹೇಳಲಿಲ್ಲ. ಮಾನ್ಯ ಸಿ.ಸಿ. ಪಾಟೀಲರು ನಾವೆಲ್ಲಾ ಕಿಷ್ಕಿಂದೆ ನಾಡಿನಿಂದ ಬಂದಿರತಕ್ಕಂತಹ ಜನ. ಕೋತಿಗಳು ಪ್ರಬಲರು, ಸ್ವಾಮಿನಿಷ್ಠರು, ರಾಮನಿಗೆ ಗೆದ್ದು ಕೊಟ್ಟವರು ಆಗಿರುವುದರಿಂದ ಹನುಮಂತನ ಅವತಾರ ನಾವು.

ಶ್ರೀ ವಾಟಾಳ್ ನಾಗರಾಜ್ :- ಈಗ ನೀವು ಸರಿಯಾಗಿ ಒಪ್ಪಿದಿರಿ. ರಾಮನ ಭಕ್ತ ಆಂಜನೇಯ. ನೀವು ಕೈ ಮುಗಿದುಕೊಂಡು ಕುಳಿತಿರುವುದು. ನಿಮ್ಮ ಪಾತ್ರದ ಬಗ್ಗೆ ತಾವೇ ಹೇಳಿದ್ದೀರಿ. ಮುಂದಕ್ಕೆ ಹೋಗುವ ಅವಶ್ಯಕತೆ ಇಲ್ಲ. ಸತ್ಯವನ್ನು ಹೊರಗೆಡವಿದೀರಿ.

ಶ್ರೀ ಕೆ. ಶ್ರೀನಿವಾಸಗೌಡ :- ರಾಮಾಂಜನೇಯ ಯುದ್ಧ ಕೂಡ ಆಗಿದೆ. ತಾವು ಅದನ್ನೂ ಕೂಡ ಜ್ಞಾಪಿಸಿಕೊಳ್ಳಬೇಕು.

ಶ್ರೀ ಎಂ.ಪಿ. ಪ್ರಕಾಶ್ :- ರಾಮಾಂಜನೇಯ ಯುದ್ಧ ಆಗಿದೆ, ಹನುಮಂತ ಎಷ್ಟು ಬಲಶಾಲಿ ಎಂದು ತಮಗೆ ಗೊತ್ತಿರುವಂಥಾದ್ದು. ಆ ಮಾತು ಬೇರೆ. ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಿವಕುಮಾರ್‌ರವರು ಹೇಳಿದಂತೆ ಅರಣ್ಯ ಇಲಾಖೆಯವರು ಈ ಆನೆಗಳ ಹಾವಳಿ ಉಪಟಳ ಬಂದಾಗ ದೊಡ್ಡ ಕದಕಗಳನ್ನು ತೋಡತಕ್ಕಂಥದ್ದಕ್ಕೆ ಅವರ ಇಲಾಖೆಯ ಆಯವ್ಯಯದಲ್ಲಿ ಹಣ ಇರುತ್ತದೆ. ಖಂಡಿತವಾಗಿ ಅದನ್ನು ಮಾಡಿಕೊಡಲೇ ಬೇಕು. ಮನುಷ್ಯ ದುರಾಸೆಗೆ ಬಿದ್ದು ವನ್ಯ ಪ್ರಾಣಿಗಳ ಆಹಾರಕ್ಕೆ ತೊಂದರೆಯಾದ ಸಂದರ್ಭದಲ್ಲಿ ಅವು ಬರುತ್ತವೆ. ಇತ್ತೀಚೆಗೆ ಪತ್ರಿಕೆಗಳಲ್ಲಿ ಕೂಡ ಬಂದಿದೆ. ಕಳ್ಳಭಟ್ಟಿ ಮಾಡುತ್ತಿರುವಂತಹ ಕಾರಣಕ್ಕಾಗಿ ಆ ವಾಸನೆಯನ್ನು ಬಲವಾಗಿ ಹಿಡಿದುಕೊಂಡು ಬಾಳೆ ಹಣ್ಣು ಮತ್ತು ಹಲಸಿನ ಹಣ್ಣುಗಳನ್ನು ಕೈಬಿಟ್ಟು ಈ ಕಳ್ಳಭಟ್ಟಿ ಹುಡುಕಿಕೊಂಡು ಬರುವಂತಹ ಪ್ರವೃತ್ತಿ ಆನೆಗಳಿಗೆ ಹೆಚ್ಚಾಗಿದೆ ಎನ್ನುವಂತಹ

ಮಾತನ್ನು ಪತ್ರಿಕೆಗಳಲ್ಲಿ ಇತ್ತೀಚೆಗೆ ಬರೆದಿದ್ದಾರೆ. ಅಷ್ಟು ವಾಸನೆಯನ್ನು ಗ್ರಹಿಸುವಂತಹ ಶಕ್ತಿ ಆಬೆಗಳಿಗೆ ಇದೆ. ಅವರು ಹೇಳಿದಂತೆ ಕಂದರವನ್ನು ತೋಡಿಸುವಂಥಾದ್ದು ಮತ್ತು ಸತ್ತಿರತಕ್ಕಂತಹ ಅಮಾಯಕ ರೈತನಿಗೆ ಕಾನೂನು ಪ್ರಕಾರ ಪರಿಹಾರವನ್ನು ಕೊಡಿಸತಕ್ಕಂತಹ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ತಾವು ಹೇಳಿದಂತೆ ಪ್ರಯೋಗಕ್ಕಾಗಿ ಮಾಡಿದಂತಹ ಕೋತಿಗಳನ್ನು Indian Institutie of Science ನವರು ಹೀಗೆ ಮಾಡಿದ್ದಾರೆ ಎನ್ನುವುದು ಹೊಸ ವಿಷಯ. ಅದು ಇದೆಯೋ ಇಲ್ಲವೆಂದು ಗೊತ್ತಿಲ್ಲ. ಅದನ್ನು ಕೇಳುತ್ತೇನೆ. ನಮ್ಮ ಕಡೆಗೆ ಕೋತಿಗಳ ಹಾವಳಿ ಜಾಸ್ತಿಯಾದಾಗ ಏನು ಮಾಡುತ್ತಾರೆಂದರೆ, ಅದನ್ನು ಬಲೆ ಹಾಕಿ ಹಿಡಿಯುವವರಿಗೆ ಗುತ್ತಿಗೆ ಕೊಡುತ್ತೇವೆ. ಅವರು ಬೇರೆ ಕಡೆಗೆ ತೆಗೆದುಕೊಂಡು ಹೋಗಿ ಅದನ್ನು ಬಿಡುತ್ತಾರೆ. ಅದನ್ನು ದೂರದಲ್ಲಿ ಬಿಡಿ ಎಂದರೆ, ಅದನ್ನು ಹತ್ತಿರದಲ್ಲಿಯೇ ಬಿಟ್ಟು ಬರುತ್ತಾರೆ. ಆದ್ದರಿಂದ ಕೋತಿಗಳ ಉಪಟಳ ನಿಮ್ಮ ಕ್ಷೇತ್ರದಲ್ಲಿಯೂ ಇದೆ.

ಶ್ರೀ ಡಿ.ಕೆ. ಶಿವಕುಮಾರ್ :– Indian Institutie of Science ನವರಿಗೆ ಕೋತಿಗಳನ್ನು ಇವರು hand over ಮಾಡಿದರು. ಆ ಕೋತಿಗಳ ಮೇಲೆ ಪ್ರಯೋಗ ಮಾಡಿ ವಾಪಸ್ ತಂದು ಅಲ್ಲಿ ಬಿಟ್ಟಿದ್ದಾರೆ. ಬೇರೆ ಎಲ್ಲಿಯಾದರೂ ಏನಾದರೂ ಮಾಡಬಹುದಾಗಿತ್ತು. ಬೆಂಗಳೂರು ಪಕ್ಕದಲ್ಲಿ ಇದೆ. ಏನಾದರೂ ಹೆಚ್ಚು ಕಡಿಮೆ ಆದರೆ ಬೆಂಗಳೂರು ಸಿಟಿಯಲ್ಲಿ ಬಂದು ಬಿಟ್ಟರೆ ದೊಡ್ಡ ತೊಂದರೆ ಆಗುತ್ತದೆ. ಅದರ ಬಗ್ಗೆ ಏನಾದರೂ ಒಂದು ವ್ಯವಸ್ಥೆ ಮಾಡಬೇಕಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್ :– ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ತರಿಸಿಕೊಂಡು ಮಾನ್ಯ ಶಾಸಕರಿಗೆ ಒದಗಿಸಿ ಕೊಡುತ್ತೇವೆ.

೫ು) ವಿಷಯ :– <u>ಕನ್ನಡ ತೇರಿನ ಬಗ್ಗೆ.</u>

ಅಧ್ಯಕ್ಷರು :– ಇವರು ಕನ್ನಡ ತೇರಿನ ಬಗ್ಗೆ ಒಂದು ವಿಷಯ ಎತ್ತಿದ್ದರು ಸಚಿವರು ಇರಲಿಲ್ಲವೆಂದು ಉತ್ತರ ಬಂದಿರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :– ಮಾನ್ಯ ಅಧ್ಯಕ್ಷರೆ, ನಾನು ಪ್ರಸ್ತಾಪ ಮಾಡಿದಾಗ ಮಾನ್ಯ ಸಚಿವರು ಇರಲಿಲ್ಲ. ಕನ್ನಡ ರಥವನ್ನು ಸುವರ್ಣ ಕರ್ನಾಟಕ ರಾಜ್ಯಕ್ಕೋಸ್ಕರ ಹೊರಡಿಸಿರತಕ್ಕಂತಹ ಒಂದು ಪವಿತ್ರವಾದ ಕನ್ನಡಿಗರ ಇತಿಹಾಸ ಪ್ರಸಿದ್ಧ ರಥವನ್ನು ಕೇರಳದ ಮೆನನ್ ಎನ್ನುವವರಿಗೆ ವಹಿಸಿದ್ದಾರೆ ಎನ್ನತಕ್ಕಂಥಾದ್ದು ದೊಡ್ಡ ಸಮಸ್ಯೆ ಆಗಿದೆ. ಮಾನ್ಯ ಸಚಿವರು ನಿನ್ನೆ ಉತ್ತರ ಕೊಡಬೇಕಾಗಿತ್ತು. ಉತ್ತರ ಕೊಟ್ಟು